ಪೊಲೀಸ್ ಮಹಾ [illegible]
ಮಹಾ ನಿರ್ದೇಶಕರವರ [illegible]
ಕರ್ನಾಟಕ ರಾಜ್ಯ ಅಗ್ನಿಶಾಮಕ ಮತ್ತು ತುರ್ತು ಸೇವೆಗಳು
ಬೆಂಗಳೂರು-560 042
ದಿನಾಂಕ: 02 APR 2024
ಕ್ರಮ ಸಂಖ್ಯೆ

## <u>ಕರ್ನಾಟಕ ಸರ್ಕಾರದ ನಡವಳಿಗಳು</u>

**ವಿಷಯ:** ಅಗ್ನಿಶಾಮಕ ಮತ್ತು ತುರ್ತು ಸೇವೆಗಳ ಇಲಾಖೆಯ ತೆರಿಗೆಯೇತರ ಆದಾಯದ ದರಗಳನ್ನು ಪರಿಷ್ಕರಿಸುವ ಬಗ್ಗೆ.

**ಓದಲಾಗಿದೆ:-**

1. ಸರ್ಕಾರದ ಆದೇಶ ಸಂಖ್ಯೆ: ಒಇ 196 ಕಅಸೇ 2017, ದಿನಾಂಕ: 27-10-2017 ಮತ್ತು 02-03-2018
2. ಪೊಲೀಸ್ ಮಹಾ ನಿರ್ದೇಶಕರು ಹಾಗೂ ಮಹಾ ನಿರ್ದೇಶಕರು, ಅಗ್ನಿಶಾಮಕ ಮತ್ತು ತುರ್ತು ಸೇವೆಗಳ ಇಲಾಖೆ, ಬೆಂಗಳೂರು ರವರ ಪತ್ರ ಸಂಖ್ಯೆ:ಲೆಪವಿ(2)71/ ಆಯವ್ಯಯ /2017-18, ದಿನಾಂಕ: 27-11-2023

**<u>ಪ್ರಸ್ತಾವನೆ:</u>**

ಮೇಲೆ ಓದಲಾದ ಕ್ರಮಾಂಕ(1)ರ ದಿನಾಂಕ: 27-10-2017 ಮತ್ತು 02-03-2018ರ ಆದೇಶಗಳಲ್ಲಿ ಅಗ್ನಿಶಾಮಕ ಮತ್ತು ತುರ್ತು ಸೇವೆಗಳ ಇಲಾಖೆಯ ತೆರಿಗೆಯೇತರ ಆದಾಯದ ದರಗಳನ್ನು ಹಣದುಬ್ಬರ ಸೂಚ್ಯಂಕ (Cost Inflation Index) ವೆಚ್ಚಗಳನ್ವಯ ಪರಿಷ್ಕರಿಸಿ ಮಂಜೂರಾತಿ ನೀಡಿ ಆದೇಶಿಸಲಾಗಿದೆ.

ಮೇಲೆ ಓದಲಾದ ಕ್ರಮಾಂಕ(2)ರ ದಿನಾಂಕ: 27-11-2023ರ ಪತ್ರದಲ್ಲಿ ಅಗ್ನಿಶಾಮಕ ಮತ್ತು ತುರ್ತು ಸೇವೆಗಳ ಇಲಾಖೆಯ ತೆರಿಗೆಯೇತರ ಆದಾಯದ ದರಗಳನ್ನು ಪರಿಷ್ಕರಣೆ ಮಾಡಲು ಪೊಲೀಸ್ ಮಹಾ ನಿರ್ದೇಶಕರು ಹಾಗೂ ಮಹಾ ನಿರ್ದೇಶಕರು, ಅಗ್ನಿಶಾಮಕ ಮತ್ತು ತುರ್ತು ಸೇವೆಗಳ ಇಲಾಖೆ, ಬೆಂಗಳೂರು ಇವರು ನಿಗದಿತ ನಮೂನೆಯೊಂದಿಗೆ ಪ್ರಸ್ತಾವನೆಯನ್ನುಸಲ್ಲಿಸಿರುತ್ತಾರೆ.

ಪೊಲೀಸ್ ಮಹಾ ನಿರ್ದೇಶಕರು ಹಾಗೂ ಮಹಾ ನಿರ್ದೇಶಕರು, ಅಗ್ನಿಶಾಮಕ ಮತ್ತು ತುರ್ತು ಸೇವೆಗಳ ಇಲಾಖೆ ಇವರ ಪ್ರಸ್ತಾವನೆಯನ್ನು ಪರಿಶೀಲಿಸಿ, ಅಗ್ನಿಶಾಮಕ ಮತ್ತು ತುರ್ತು ಸೇವೆಗಳ ಇಲಾಖೆಯಲ್ಲಿ ಪ್ರಸ್ತುತ ಚಾಲ್ತಿಯಲ್ಲಿರುವ ತೆರಿಗೆಯೇತರ ಆದಾಯದ ದರಗಳನ್ನು, ವೆಚ್ಚದ ಹಣದುಬ್ಬರ ಸೂಚ್ಯಂಕದ ಪ್ರಕಾರ ದರಗಳನ್ನು ಮೇಲ್ಮುಖವಾಗಿ ಪರಿಷ್ಕರಿಸಲು ಸರ್ಕಾರವು ನಿರ್ಧರಿಸಿರುವ ಕಾರಣ ಈ ಆದೇಶ.

**<u>ಸರ್ಕಾರದ ಆದೇಶ ಸಂಖ್ಯೆ: ಹೆಚ್‌ಡಿ 334 ಎಸ್‌ಎಫ್‌ಬಿ 2023,</u>**
**<u>ಬೆಂಗಳೂರು, ದಿನಾಂಕ: 30-03-2024</u>**

ಪ್ರಸ್ತಾವನೆಯಲ್ಲಿ ವಿವರಿಸಿರುವ ಅಂಶಗಳ ಹಿನ್ನೆಲೆಯಲ್ಲಿ, ಅಗ್ನಿಶಾಮಕ ಮತ್ತು ತುರ್ತು ಸೇವೆಗಳ ಇಲಾಖೆಯಲ್ಲಿ ಪ್ರಸ್ತುತ ಚಾಲ್ತಿಯಲ್ಲಿರುವ ತೆರಿಗೆಯೇತರ ಆದಾಯದ ದರಗಳನ್ನು, ವೆಚ್ಚದ ಹಣದುಬ್ಬರ ಸೂಚ್ಯಂಕದ (Cost Inflation Index) ಪ್ರಕಾರ ದರಗಳನ್ನು ಅನುಬಂಧದಲ್ಲಿರುವಂತೆ ಮೇಲ್ಮುಖವಾಗಿ ಸರ್ಕಾರವು ಪರಿಷ್ಕರಿಸಿ ಆದೇಶಿಸಿದೆ.

ಈ ಆದೇಶವನ್ನು ಆರ್ಥಿಕ ಇಲಾಖೆಯ ಟಿಪ್ಪಣಿ ಸಂಖ್ಯೆ: ಆಇ 485 ವೆಚ್ಚ-11/2023, ದಿನಾಂಕ: 10-01-2024 ಮತ್ತು 16-03-2024ರಲ್ಲಿ ನೀಡಿದ ಸಹಮತಿ ಮೇರೆಗೆ ಹೊರಡಿಸಲಾಗಿದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ
ಮತ್ತು ಅವರ ಹೆಸರಿನಲ್ಲಿ

B.K.B. 30/3/24
(ಬಿ.ಕೆ ಭುವನೇಂದ್ರ ಕುಮಾರ್)
ಸರ್ಕಾರದ ಅಧೀನ ಕಾರ್ಯದರ್ಶಿ,
ಒಳಾಡಳಿತ ಇಲಾಖೆ(ಪೊ.ಸ.ಸೇ).

30/3/24

**ಇವರಿಗೆ:**

ಸಂಕಲನಕಾರರು, ಕರ್ನಾಟಕ, ಬೆಂಗಳೂರು ಮುಂದಿನ ವಿಶೇಷ ಇ-ರಾಜ್ಯ ಪತ್ರದಲ್ಲಿ ಪ್ರಕಟಿಸಲು.

**ಪ್ರತಿ:**

1. ಪ್ರಧಾನ ಮಹಾಲೇಖಪಾಲರು (ಜಿ&ಎಸ್.ಎಸ್.ಎ) / (ಜಿ&ಎಸ್.ಎಸ್.ಎ) / (ಎ&ಇ) ಕರ್ನಾಟಕ, ಬೆಂಗಳೂರು.
2. ಪೊಲೀಸ್ ಮಹಾ ನಿರ್ದೇಶಕರು ಹಾಗೂ ಮಹಾ ನಿರ್ದೇಶಕರು, ಅಗ್ನಿಶಾಮಕ ಮತ್ತು ತುರ್ತು ಸೇವೆಗಳು, ನಂ.1, ಅಣ್ಣಾಸ್ವಾಮಿ ಮೊದಲಿಯಾರ್ ರಸ್ತೆ, ಬೆಂಗಳೂರು-560042.
3. ಸರ್ಕಾರದ ಜಂಟಿ ಕಾರ್ಯದರ್ಶಿ ಮತ್ತು ಆಂತರಿಕ ಆರ್ಥಿಕ ಸಲಹೆಗಾರರು, ಒಳಾಡಳಿತ ಇಲಾಖೆ ಹಾಗೂ ಸಾರಿಗೆ ಇಲಾಖೆ, ಬಹುಮಹಡಿಗಳ ಕಟ್ಟಡ, ಬೆಂಗಳೂರು
4. ಜಂಟಿ ನಿರ್ದೇಶಕರು / ಉಪ ನಿರ್ದೇಶಕರು, ರಾಜ್ಯ ಹುಜೂರು, ಖಜಾನೆ, ಬೆಂಗಳೂರು
5. ಸರ್ಕಾರದ ಅಧೀನ ಕಾರ್ಯದರ್ಶಿ, ಆರ್ಥಿಕ ಇಲಾಖೆ(ವೆಚ್ಚ-11), ವಿಧಾನಸೌಧ, ಬೆಂಗಳೂರು
6. ಸರ್ಕಾರದ ಪ್ರಧಾನ ಕಾರ್ಯದರ್ಶಿ(ಪಿಸಿಎಎಸ್) ರವರ ಆಪ್ತ ಕಾರ್ಯದರ್ಶಿ, ಒಳಾಡಳಿತ ಇಲಾಖೆ, ವಿಧಾನಸೌಧ ಬೆಂಗಳೂರು
7. ಸರ್ಕಾರದ ವಿಶೇಷ ಕಾರ್ಯದರ್ಶಿ(ಪೊಲೀಸ್ ಸಹಾಯಕ ಸೇವೆಗಳು ಮತ್ತು ಸಮನ್ವಯ) ರವರ ಆಪ್ತ ಸಹಾಯಕರು, ಒಳಾಡಳಿತ ಇಲಾಖೆ, ವಿಧಾನಸೌಧ ಬೆಂಗಳೂರು
8. ಇಲಾಖಾ ವೆಬ್‌ಸೈಟ್‌ನಲ್ಲಿ ಪ್ರಕಟಿಸಲು
9. ಶಾಖಾ ರಕ್ಷಾ ಕಡತ.

**ಸರ್ಕಾರದ ಆದೇಶ ಸಂಖ್ಯೆ: ಹೆಚ್‌ಡಿ 334 ಎಸ್‌ಎಫ್‌ಬಿ 2023, ದಿನಾಂಕ: 30-03-2024ರ ಅನುಬಂಧ**

| ಕ್ರ. ಸಂ | ತೆರಿಗೆಯೇತರ ಶುಲ್ಕದ ಉದ್ದೇಶ | ಪ್ರಸ್ತುತ ಚಾಲ್ತಿಯಲ್ಲಿರುವ ದರ | ಯಾವ ಸಾಲಿನಲ್ಲಿ ದರ ನಿಗದಿಪಡಿಸಲಾಗಿದೆ | 2024ನೇ ಸಾಲಿನಲ್ಲಿ ನಿಗದಿ ಪಡಿಸಲಾದ ದರ (CII – 24 to 28%) | ಶೇಕಡಾ ವಾರು ಹೆಚ್ಚಳ | ಭರಿಸಬಹುದಾದ ಇಲಾಖೆಯ ಲೆಕ್ಕ ಶೀರ್ಷಿಕೆ |
|---|---|---|---|---|---|---|
| 1 | ಎ) ಚಲನಚಿತ್ರ ಚಿತ್ರೀಕರಣಕ್ಕಾಗಿ ಜಲ ವಾಹನದ ತಟಸ್ಥ ಕರೆ ಶುಲ್ಕ | ಒಂದು ದಿನ-ಯಾ-ದಿನದ ಭಾಗಕ್ಕೆ ರೂ.37,500/- | 27.10.2017 | ಒಂದು ದಿನ-ಯಾ-ದಿನದ ಭಾಗಕ್ಕೆ ರೂ.48000/- | 28% | 0070-60-109-0-02 |
| | ಬಿ) ಚಲನಚಿತ್ರೀಕರಣಕ್ಕಾಗಿ ಪಂಪನ್ನು ಬಳಸಿದರೆ ಶುಲ್ಕ, ವಾಹನ ಚಲನೆ ಶುಲ್ಕ | ಒಂದು ಗಂಟೆ-ಯಾ-ಅದರ ಭಾಗಕ್ಕೆ ರೂ.2,500.00 ಪ್ರತಿ ಕಿ.ಮೀ.ಗೆ ರೂ.125/- | 27.10.2017 | ಒಂದು ಗಂಟೆ-ಯಾ-ಅದರ ಭಾಗಕ್ಕೆ ರೂ.3,200.00 ಪ್ರತಿ ಕಿ.ಮೀ.ಗೆ ರೂ.160/- | 28% | 0070-60-109-0-02 |
| | **2. ಸಾರ್ವಜನಿಕ ಸಮಾರಂಭಗಳಿಗೆ** | | | | | |
| 2.1 | ವಸ್ತು ಪ್ರದರ್ಶನಗಳು, ಜಾತ್ರೆಗಳು, ವಿಹಾರೋತ್ಸವಗಳು, ಸಮ್ಮೇಳನಗಳು ಮತ್ತು ಇತರೆ ಇದೇ ಗುಂಪಿಗೆ ಸೇರಿದ ಸಮ್ಮೇಳನಗಳು ಮತ್ತು ಇತರೆ ಇದೇ ಗುಂಪಿಗೆ ಸೇರಿದ ಲಾಭಕರವಿಲ್ಲದ ಕೂಟಗಳಿಗೆ ಪರೋಪಕಾರಿ (ಜನರಹಿತ) ಕೂಟಗಳಿಗೆ ಮತ್ತು ಮದುವೆ ಸಮಾರಂಭಗಳಿಗೆ ನಿಯೋಜಿಸಿದಾಗ | ದಿನದ 24 ಗಂಟೆ-ಯಾ-ಅದರ ಭಾಗಕ್ಕೆ ರೂ.6000-00 | 27.10.2017 | ದಿನದ 24 ಗಂಟೆ-ಯಾ-ಅದರ ಭಾಗಕ್ಕೆ ರೂ.7700-00 | 28.34% | 0070-60-109-0-02 |
| 2.2 | ವಸ್ತು ಪ್ರದರ್ಶನಗಳು, ಜಾತ್ರೆಗಳು, ವಿಹಾರೋತ್ಸವಗಳು, ಸಮ್ಮೇಳನಗಳು ಮತ್ತು ಇತರೆ ಇದೇ ಗುಂಪಿಗೆ ಸೇರಿದ ಲಾಭಕ್ಕಾಗಿ ನಿಯೋಜಿಸಿದ ಇತರೆ ಕೂಟಗಳಿಗೆ | ದಿನದ 24 ಗಂಟೆ-ಯಾ-ಅದರ ಭಾಗಕ್ಕೆ ರೂ.10,000-00 | 27.10.2017 | ದಿನದ 24 ಗಂಟೆ-ಯಾ-ಅದರ ಭಾಗಕ್ಕೆ ರೂ.12,800-00 | 28% | 0070-60-109-0-02 |
| | **3.ಖಾಸಗಿ ಉಪಯೋಗಕ್ಕಾಗಿ ಪಂಪಿನಿಂದ ನೀರನ್ನು ಮೇಲಕ್ಕೆತ್ತುವ ಶುಲ್ಕ (ವಿಪತ್ತು ನಿರ್ವಹಣೆಯನ್ನು ಹೊರತುಪಡಿಸಿ)** | | | | | |
| 3.1 | ಟ್ರೈಲರ್ ಪಂಪ್: ಹೈಪ್ರೆಷರ್ ಪಂಪ್: ಜಲವಾಹನವನ್ನು ಉಪಯೋಗಿಸಿದಾಗ | ಪ್ರತಿ ಗಂಟೆಗೆ ರೂ.1600-00 | 27.10.2017 | ಪ್ರತಿ ಗಂಟೆಗೆ ರೂ.2100-00 | 31.25% | 0070-60-109-0-02 |
| 3.2 | ಪೋರ್ಟಬಲ್ ಪಂಪ್: (ಹಗುರ ರೇಚಕ) ಉಪಯೋಗಿಸಿದಾಗ ವಾಹನ ಚಾಲನೆ ಶುಲ್ಕ | ಪ್ರತಿ ಗಂಟೆಗೆ ರೂ.1200-00<br>ಪ್ರತಿ ಕಿ.ಮೀ.ಗೆ ರೂ.50-00 | 27.10.2017 | ಪ್ರತಿ ಗಂಟೆಗೆ ರೂ.1500-00<br>ಪ್ರತಿ ಕಿ.ಮೀ.ಗೆ ರೂ.65-00 | 25%<br>30% | 0070-60-109-0-02 |
| 4. | **ತಿರುಗು ಮೇಜಿನ ನಿಚ್ಚಣಿಕೆ (ಟಿಟಿಎಲ್) ಮತ್ತು ಸ್ನಾರ್ಕಲ್ ಘಟಕಗಳ ತಟಸ್ಥ ಕರ್ತವ್ಯಕ್ಕೆ** | | | | | |

| | | | | | | |
|---|---|---|---|---|---|---|
| 4.1 | ಸಾರ್ವಜನಿಕ ಸಮಾರಂಭಗಳಿಗೆ, ವಸ್ತು ಪ್ರದರ್ಶನಗಳಿಗೆ, ಜಾತ್ರೆಗಳಿಗೆ, ವಿಹಾರೋತ್ಸವಗಳಿಗೆ, ಸಮ್ಮೇಳನಗಳಿಗೆ ಮತ್ತು ಇತರೆ ಗುಂಪಿಗೆ ಸೇರಿದ ಲಾಭಕರವಲ್ಲದ ಕೂಟಗಳಿಗೆ ಪರೋಪಕಾರಿ (ಜನಹಿತ) ಕೂಟಗಳಿಗೆ ನಿಯೋಜಿಸಿದಾಗ | ಪ್ರತಿ ಕಿ.ಮಿ ಚಾಲನೆಗೆ ರೂ.60-00 ಮತ್ತು ಪ್ರತಿ ಗಂಟೆಯ ಉಪಯೋಗಕ್ಕೆ ರೂ.3000-00 | 27.10.2017 | ಪ್ರತಿ ಕಿ.ಮಿ ಚಾಲನೆಗೆ ರೂ.75-00 ಮತ್ತು ಪ್ರತಿ ಗಂಟೆಯ ಉಪಯೋಗಕ್ಕೆ ರೂ.3800-00 | 25%<br>26.67% | 0070-60-109-0-02 |
| 4.2 | ಸಾರ್ವಜನಿಕ ಸಮಾರಂಭಗಳಿಗೆ, ವಸ್ತು ಪ್ರದರ್ಶನಗಳಿಗೆ, ಜಾತ್ರೆಗಳಿಗೆ, ವಿಹಾರೋತ್ಸವಗಳಿಗೆ, ಸಮ್ಮೇಳನಗಳಿಗೆ ಮತ್ತು ಇತರೆ ಗುಂಪಿಗೆ ಸೇರಿದ ಲಾಭಕರವಲ್ಲದ ಕೂಟಗಳಿಗೆ ಪರೋಪಕಾರಿ ಕೂಟಗಳಿಗೆ ನಿಯೋಜಿಸಿದಾಗ | ಪ್ರತಿ ಕಿ.ಮಿ ಚಾಲನೆಗೆ ರೂ.60-00 ಮತ್ತು ಪ್ರತಿ ಗಂಟೆಯ ಉಪಯೋಗಕ್ಕೆ ರೂ.18,000-00 | 27.10.2017 | ಪ್ರತಿ ಕಿ.ಮಿ ಚಾಲನೆಗೆ ರೂ.75-00 ಮತ್ತು ಪ್ರತಿ ಗಂಟೆಯ ಉಪಯೋಗಕ್ಕೆ ರೂ.23,000-00 | 25%<br>27.78% | 0070-60-109-0-02 |
| 4.3 | ಚಲನಚಿತ್ರ ಮಂದಿರಗಳ ಆಕ್ಷೇಪಣಾ ರಹಿತ ಪ್ರಮಾಣ ಪತ್ರದ ಶುಲ್ಕ | ಶಾಶ್ವತ ಮತ್ತು ಅರೆ ಶಾಶ್ವತ ಚಿತ್ರಮಂದಿರಗಳಿಗೆ ರೂ.20,000-00 ಮತ್ತು ಸಂಚಾರಿ ಚಿತ್ರಮಂದಿರಗಳಿಗೆ ರೂ.2000-00 | 27.10.2017 | ಶಾಶ್ವತ ಮತ್ತು ಅರೆ ಶಾಶ್ವತ ಚಿತ್ರಮಂದಿರಗಳಿಗೆ ರೂ.25,500-00 ಮತ್ತು ಸಂಚಾರಿ ಚಿತ್ರಮಂದಿರಗಳಿಗೆ ರೂ.2500-00 | 27.5% | 0070-60-109-0-02 |
| | Multiplex--Rs.5000/- per Screen | | | | 25% | 0070-60-109-0-02 |
| 4.4 | ಅಗ್ನಿ ಅಪಘಾತ ವರದಿ ಪ್ರತಿ ಶುಲ್ಕ | ವಾಣಿಜ್ಯ ಸಂಕೀರ್ಣಗಳಿಗೆ ಮತ್ತು ಔದ್ಯಮಿಕ ಘಟಕಗಳಿಗೆ ರೂ.4000-00 ನಿವಾಸದ ಮನೆಗಳಿಗೆ: ಗುಡಿಸಲುಗಳಿಗೆ, ಹುಲ್ಲಿನ ಬಣವೆಗಳಿಗೆ ಮತ್ತು ಪರಿಹಾರಕ್ಕಾಗಿ ಕೋರಲು ರೂ.200-00 | 27.10.2017 | ವಾಣಿಜ್ಯ ಸಂಕೀರ್ಣಗಳಿಗೆ ಮತ್ತು ಔದ್ಯಮಿಕ ಘಟಕಗಳಿಗೆ ರೂ.5100-00 ನಿವಾಸದ ಮನೆಗಳಿಗೆ: ಗುಡಿಸಲುಗಳಿಗೆ, ಹುಲ್ಲಿನ ಬಣವೆಗಳಿಗೆ ಮತ್ತು ಪರಿಹಾರಕ್ಕಾಗಿ ಕೋರಲು ರೂ.250-00 | 27.5%<br>25% | 0070-60-109-0-02 |
| 5. | **ತಪಾಸಣೆ ಮತ್ತು ಆಕ್ಷೇಪಣೆ ರಹಿತ ಪ್ರಮಾಣ ಪತ್ರವನ್ನು ಜಾರಿ ಮಾಡಲು** | | | | | |
| 5.1 | ಉಧ್ಯಮಗಳು, ಪೆಟ್ರೋಲ್: ಡೀಸೆಲ್ ದಾಸ್ತಾನುಗಾರರುಗಳು, ಎಲ್.ಪಿ.ಜಿ ದಾಸ್ತಾನುಗಾರರುಗಳು, ಸಗಟು ಪಟಾಕಿ, ಸಗಟು ದಾಸ್ತಾನುಗಾರರುಗಳು, ರಾಸಾಯನಿಕ ವಸ್ತುಗಳು ದಾಸ್ತಾನುಗಾರ ಮನೋರಂಜನಾ ಕೇಂದ್ರಗಳು, ಸಂಗೀತ ಮೇಳಗಳು ಮುಂತಾದವುಗಳು | ರೂ.50,000-00 | 27.10.2017 | ರೂ.64,000-00 | 28% | 0070-60-109-0-02 |

| | | | | | | |
|---|---|---|---|---|---|---|
| 5.2 | Circus | ರೂ.4,200-00 | 27.10.2017 | ರೂ.5,400-00 per month | 28.57% | 0070-60-109-0-02 |
| 6. | **ತಪಾಸಣೆ ಮತ್ತು ನಿರಾಕ್ಷೇಪಣಾ ಪ್ರಮಾಣ ಪತ್ರವನ್ನು ಜಾರಿ ಮಾಡಲು** | | | | | |
| 6.1 | ಪಟಾಕಿಗಳ ಬಿಡಿ ಮಾರಾಟ ಮಳಿಗೆಗಳು, ವಿಹಾರೋತ್ಸವಗಳು, ಜಾತ್ರೆಗಳು, ವಿಡಿಯೋ ಕೇಂದ್ರಗಳು, ವಿಡಿಯೋ ಗೇಮ್ಸ್‌ಗಳು, ಸಂಗೀತ ರಾತ್ರಿಗಳು, ಮ್ಯಾಜಿಕ್ ಷೋ ಮುಂತಾದವುಗಳು | ರೂ.5000/- ಇಲಾಖೆಯ ಶಿಪಾರಸ್ಸು ನಿಗಧಿಪಡಿಸಿದೆ | 27.10.2017 | ರೂ.6400/- | 28% | 0070-60-109-0-02 |
| 6.2 | ಸಂಗೀತ ಮೇಳ, ಸಂಗೀತ ರಾತ್ರಿ ಇತ್ಯಾದಿ ಕಾರ್ಯಕ್ರಮಗಳನ್ನು ಹೊರತುಪಡಿಸಿ ಉಳಿದ ಸಾಂಸ್ಕೃತಿಕ ಕಾರ್ಯಕ್ರಮಗಳಿಗೆ ನಿರಾಕ್ಷೇಪಣಾ ಪ್ರಮಾಣ ಪತ್ರ ಜಾರಿ ಮಾಡಲು | ರೂ.5000/- ಇಲಾಖೆಯ ಶಿಫಾರಸ್ಸು ನಿಗಧಿಪಡಿಸಿದೆ. | 27.10.2017 | ರೂ.6400/- | 28% | 0070-60-109-0-02 |
| | 1. Non-profitable | ರೂ.5000/- | 27.10.2017 | ರೂ.6400/- | 28% | 0070-60-109-0-02 |
| | 2. Profitable | ರೂ.20,000/- | 27.10.2017 | ರೂ.25,600/- | 28% | 0070-60-109-0-02 |
| 6.3 | ಬಹುಮಹಡಿ ಕಟ್ಟಡಗಳ ಗುಂಪಿಗೆ ಸೇರದ ಕಟ್ಟಡಗಳಲ್ಲಿ ಅಗ್ನಿಶಮನ ಮತ್ತು ತೆರವು ವಿಧಾನಗಳ ಬಗ್ಗೆ ಸಲಹೆ ನೀಡಲು ಶುಲ್ಕ | ರೂ.50,000/- | 27.10.2017 | ರೂ.64,000/- | 28% | 0070-60-109-0-02 |
| 6.4 | ವಾಣಿಜ್ಯ ಔದ್ಯಮಿಕ ಕೇಂದ್ರಗಳಲ್ಲಿ ದಾಸ್ತಾನುಗಾರಗಳಲ್ಲಿ ಮತ್ತು ಇತರೆ ಆವರಣಗಳಲ್ಲಿ ಅಗ್ನಿಶಮನ ಮತ್ತು ತೆರವು ವಿಧಾನಗಳ ಬಗ್ಗೆ ಸಲಹೆ ನೀಡಲು ಶುಲ್ಕ | ರೂ.20,000/- | 27.10.2017 | ರೂ.25,600/- | 28% | 0070-60-109-0-02 |
| 6.5 | ಅಗ್ನಿ ಪ್ರದರ್ಶನಕ್ಕೆ ವಾಹನವನ್ನು ಉಪಯೋಗಿಸಿದ ಸಂದರ್ಭದಲ್ಲಿ ಚಾಲನ ಶುಲ್ಕ ಅಗ್ನಿನಂದಕಗಳಿಗೆ ಬೇಕಾದ ರೀಪಿಲ್ಲು ಹಾಗೂ ಇತ್ಯಾದಿ ವಸ್ತುಗಳು | ಪ್ರತಿ ಕಿ.ಮೀ.ಗೆ ರೂ.100-00 ಪ್ರದರ್ಶನವನ್ನು ಕೋರಿರುವವರು ರೀಫಿಲ್ಲು, ಇತರೆ ವಸ್ತುಗಳನ್ನು ಸರಬರಾಜು ಮಾಡಬೇಕು | 27.10.2017 | ಪ್ರತಿ ಕಿ.ಮೀ.ಗೆ ರೂ.130-00 ಪ್ರದರ್ಶನವನ್ನು ಕೋರಿರುವವರು ರೀಫಿಲ್ಲು, ಇತರೆ ವಸ್ತುಗಳನ್ನು ಸರಬರಾಜು ಮಾಡಬೇಕು | 30% | 0070-60-109-0-02 |
| 6.6 | ಉಪನ್ಯಾಸ ಶುಲ್ಕ | ಪ್ರತಿ ಗಂಟೆಗೆ ರೂ.800-00 | 27.10.2017 | ಪ್ರತಿ ಗಂಟೆಗೆ ರೂ.1025-00 | 28.13% | 0070-60-109-0-02 |

| | | | | | | |
|---|---|---|---|---|---|---|
| 6.7 | ಉಪನ್ಯಾಸ ನೀಡಲು ನಿಯೋಜಿಸುವ ಅಧಿಕಾರಿಯವರ ಪ್ರಯಾಣ ವೆಚ್ಚ | ಮೊದಲ ದರ್ಜೆಯ ರೈಲು ದರ ಹಾಗೂ ಅರ್ಹ ದಿನ ಭತ್ಯೆ ಸೂಚನೆ:- ವಿದ್ಯಾಸಂಸ್ಥೆ ಸರ್ಕಾರಿ ಕಛೇರಿ ಹಾಗೂ ಸೇವಾ ಸಂಸ್ಥೆಗಳು ಜನರಲ್ಲಿ ಅಗ್ನಿಶಮನದ ಬಗ್ಗೆ ತಿಳುವಳಿಕೆ ಮೂಡಿಸಲು ವ್ಯವಸ್ಥಿಸುವ ಉಪನ್ಯಾಸ ಹಾಗೂ ಪ್ರಾತ್ಯಕ್ಷಿತೆಯನ್ನು ಉಚಿತವಾಗಿ ವ್ಯವಸ್ಥಿಸಲಾಗುವುದು. | 27.10.2017 | ಮೊದಲ ದರ್ಜೆಯ ರೈಲು ದರ ಹಾಗೂ ಅರ್ಹ ದಿನ ಭತ್ಯೆ ಸೂಚನೆ:- ವಿದ್ಯಾಸಂಸ್ಥೆ ಸರ್ಕಾರಿ ಕಛೇರಿ ಹಾಗೂ ಸೇವಾ ಸಂಸ್ಥೆಗಳು ಜನರಲ್ಲಿ ಅಗ್ನಿಶಮನದ ಬಗ್ಗೆ ತಿಳುವಳಿಕೆ ಮೂಡಿಸಲು ವ್ಯವಸ್ಥಿಸುವ ಉಪನ್ಯಾಸ ಹಾಗೂ ಪ್ರಾತ್ಯಕ್ಷಿತೆಯನ್ನು ಉಚಿತವಾಗಿ ವ್ಯವಸ್ಥಿಸಲಾಗುವುದು. | | 0070-60-109-0-02 |
| 7. | **ಆರ್. ಎ. ಮುಂಡ್ಕೂರ್ ಅಗ್ನಿಶಾಮಕ ಮತ್ತು ತುರ್ತು ಸೇವಾ ಅಕಾಡಮಿಯಲ್ಲಿ ವ್ಯವಸ್ಥಿಸುವ ವಿವಿಧ ತರಬೇತಿಗಳಿಗೆ** | | | | | |
| 7.1 | ವಾಣಿಜ್ಯ ಔದ್ಯಮಿಕ ಸಂಸ್ಥೆಗಳ ಸಿಬ್ಬಂದಿಗಳಿಗೆ 30 ದಿವಸಗಳ ಅವಧಿಯ ತರಬೇತಿ | 1. ಪ್ರತಿಯೊಬ್ಬರಿಗೆ ರೂ.10,000/- | 27.10.2017 | 1. ಪ್ರತಿಯೊಬ್ಬರಿಗೆ ರೂ.12,800/- | 28% | 0070-60-109-0-02 |
| | | 2. ಅಗ್ನಿಶಾಮಕ ಸಿಬ್ಬಂದಿಗಳ ಅವಲಂಬಿತರಿಗೆ ರೂ.2,000/- | 27.10.2017 | 2. ಅಗ್ನಿಶಾಮಕ ಸಿಬ್ಬಂದಿಗಳ ಅವಲಂಬಿತರಿಗೆ ರೂ.2,500/- | 25% | 0070-60-109-0-02 |
| 7.2 | ವಾಣಿಜ್ಯ ಹಾಗೂ ಇತರೆ ಸಂಘ ಸಂಸ್ಥೆಗಳ ಸಿಬ್ಬಂದಿಗಳಿಗೆ 12 ದಿವಸಗಳ ಅವಧಿಯ ತರಬೇತಿ | ಪ್ರತಿಯೊಬ್ಬರಿಗೆ ರೂ.5,000-00 | 27.10.2017 | ಪ್ರತಿಯೊಬ್ಬರಿಗೆ ರೂ.6,400-00 | 28% | 0070-60-109-0-02 |
| 7.3 | ಸಿನಿಮಾ, ಪೆಟ್ರೋಲ್ ಬಂಕ್, ಸ್ಫೋಟಕ ವಸ್ತುಗಳ ಹಾಗೂ ಇತರೆ ದಾಸ್ತಾನುಗಾರ ಹಾಗೂ ವಿತರಣಾ ಸ್ಥಳಗಳಲ್ಲಿ ಕರ್ತವ್ಯ ನಿರ್ವಹಿಸುತ್ತಿರುವ ಸಿಬ್ಬಂದಿಗಳಿಗೆ 03-06 ದಿವಸಗಳ ಅವಧಿಯ ತರಬೇತಿ | ಪ್ರತಿಯೊಬ್ಬರಿಗೆ ರೂ.2,000-00 | 27.10.2017 | ಪ್ರತಿಯೊಬ್ಬರಿಗೆ ರೂ.2,550-00 | 27.5% | 0070-60-109-0-02 |
| 7.4 | ಕೇಂದ್ರ ಸರ್ಕಾರ, ಹೊರ ರಾಜ್ಯ ಸರ್ಕಾರಿ ನೌಕರರು, ಖಾಸಗಿ ಸಂಸ್ಥೆಗಳು, ಹಾಗೂ ಸ್ಥಳೀಯ ಸಂಘ ಸಂಸ್ಥೆ ಇತ್ಯಾದಿಗಳಲ್ಲಿ ಕರ್ತವ್ಯ ನಿರ್ವಹಿಸುತ್ತಿರುವ ಅಗ್ನಿಶಾಮಕ ಸೇವಾ ಅಧಿಕಾರಿ/ ಮೇಲ್ವಿಚಾರಕರಿಗೆ 6 ತಿಂಗಳ ಅವಧಿಯ ಅಗ್ನಿಶಾಮಕ ಠಾಣಾಧಿಕಾರಿ ತರಬೇತಿ | ಪ್ರತಿಯೊಬ್ಬರಿಗೆ ರೂ.48,000-00 | 27.10.2017 | ಪ್ರತಿಯೊಬ್ಬರಿಗೆ ರೂ.62,000-00 | 29.17% | 0070-60-109-0-02 |
| 7.5 | ಕೇಂದ್ರ ಸರ್ಕಾರ, ಹೊರ ರಾಜ್ಯ ಸರ್ಕಾರಿ ನೌಕರರು, ಖಾಸಗಿ ಸಂಸ್ಥೆಗಳು | ಪ್ರತಿಯೊಬ್ಬರಿಗೆ ರೂ.15,000-00 | 27.10.2017 | ಪ್ರತಿಯೊಬ್ಬರಿಗೆ ರೂ.19,200-00 | 28% | 0070-60-109-0-02 |

| | | | | | | |
|---|---|---|---|---|---|---|
| 7.6 | ಸ್ಥಳೀಯ ಸಂಘ ಸಂಸ್ಥೆ ಇತ್ಯಾದಿಗಳಲ್ಲಿ ಕರ್ತವ್ಯ ನಿರ್ವಹಿಸುತ್ತಿರುವ ಅಗ್ನಿಶಾಮಕ ಸೇವಾ ಚಾಲಕರಿಗೆ 3 ತಿಂಗಳ ಅವಧಿಯ ತರಬೇತಿ | ಪ್ರತಿಯೊಬ್ಬರಿಗೆ ರೂ.15,000-00 | 27.10.2017 | ಪ್ರತಿಯೊಬ್ಬರಿಗೆ ರೂ.19,200-00 | 28% | 0070-60-109-0-02 |
| 7.7 | ಕೇಂದ್ರ ಸರ್ಕಾರ, ಹೊರ ರಾಜ್ಯ ಸರ್ಕಾರ, ಕಾರ್ಖಾನೆ ಹಾಗೂ ಸ್ಥಳೀಯ ಸಂಘ ಸಂಸ್ಥೆ ಇತ್ಯಾದಿಗಳಲ್ಲಿ ಕರ್ತವ್ಯ ನಿರ್ವಹಿಸುತ್ತಿರುವ ಅಗ್ನಿಶಾಮಕ ಸೇವಾ ಸಿಬ್ಬಂದಿಗಳಿಗೆ 6 ತಿಂಗಳ ಅವಧಿಯ ತರಬೇತಿ | ಪ್ರತಿಯೊಬ್ಬರಿಗೆ ರೂ.36,000-00 | 27.10.2017 | ಪ್ರತಿಯೊಬ್ಬರಿಗೆ ರೂ.46,000-00 | 27.78% | 0070-60-109-0-02 |
| **ಸೂಚನೆ: ಕ್ರಮ ಸಂ.7 ರಲ್ಲಿ ಉಲ್ಲೇಖಿಸಿರುವ ಶುಲ್ಕ ಬರೀ ತರಬೇತಿಗೆ ಸಂಬಂಧಿಸಿದ್ದು, ವಸತಿ ಹಾಗೂ ಊಟದ ಸೌಲಭ್ಯ ಇತ್ಯಾದಿಗೆ ಪ್ರತ್ಯೇಕವಾಗಿ ಇಲಾಖೆಯು ಸಮಯ ಸಮಯಕ್ಕೆ ನಿಗಧಿಪಡಿಸುವ ದರವನ್ನು ಸಂಬಂಧಪಟ್ಟ ತರಬೇತಿದಾರರು ಪಾವತಿಸಬೇಕು** | | | | | | |
| 8.1 | ಬಿ.ಎ.ಸೆಟ್ ಚಾರ್ಜಿಂಗ್ ಶುಲ್ಕ | ರೂ.600/- | 27.10.2017 | ರೂ.770/- | 28.33% | 0070-60-109-0-02 |
| 8.2 | ರಾಜಕೀಯ ಪಕ್ಷಗಳು ವ್ಯವಸ್ಥಿಸುವ ವಿಚಾರ ಸಂಕೀರ್ಣ, ಸಾರ್ವಜನಿಕ ಸಭೆ ಇತ್ಯಾದಿ ಸಂದರ್ಭದಲ್ಲಿ ಹೆಲಿಪ್ಯಾಡ್ ಹಾಗೂ ಸಭೆ ನಡೆಯುವ ಸ್ಥಳಗಳಲ್ಲಿ ವಾಹನವನ್ನು ನಿಲುಗಡೆ ಕರ್ತವ್ಯಕ್ಕೆ ನಿಯೋಜಿಸಿದಾಗ ವಾಹನ ಚಾಲನೆ ಶುಲ್ಕ | ಪ್ರತಿ ದಿನ ರೂ.8,000-00 | 27.10.2017 | ಪ್ರತಿ ದಿನ ರೂ.10,200-00 | 27.5% | 0070-60-109-0-02 |
| | | ಪ್ರತಿ ಕಿ.ಮೀ.ಗೆ ರೂ.100-00 | 27.10.2017 | ಪ್ರತಿ ಕಿ.ಮೀ.ಗೆ ರೂ.130-00 | 30% | 0070-60-109-0-02 |
| 8.3 | ಕೃಷಿ ಭೂಮಿಯನ್ನು ಕೃಷಿಯೇತರ ಭೂಮಿಯನ್ನಾಗಿ ಪರಿವರ್ತಿಸಲು ನಿರಾಕ್ಷೇಪಣಾ ಪ್ರಮಾಣ ಪತ್ರ ನೀಡಲು | ರೂ.20,000-00 ಒಂದು ಎಕರೆಗೆ ಯಾ ಅದರ ಭಾಗಕ್ಕೆ | 27.10.2017 | ರೂ.25,600-00 ಒಂದು ಎಕರೆಗೆ ಯಾ ಅದರ ಭಾಗಕ್ಕೆ | 28% | 0070-60-109-0-02 |
| 8.4 | ಬಹುಮಹಡಿ ಕಟ್ಟಡಗಳ ಗುಂಪಿಗೆ ಸೇರದ ಕಟ್ಟಡಗಳಲ್ಲಿ ಕಾರ್ಯನಿರ್ವಹಿಸುತ್ತಿರುವ ವಿದ್ಯಾಸಂಸ್ಥೆಗಳಿಗೆ ನಿರಾಕ್ಷೇಪಣಾ ಪ್ರಮಾಣ ಪತ್ರ/ ಸಲಹೆ ನೀಡಲು | ರೂ.20,000-00 | 27.10.2017 | ರೂ.25,600-00 | 28% | 0070-60-109-0-02 |
| **9. ನಿರಾಕ್ಷೇಪಣಾ ಪತ್ರ:-** | | | | | | |
| 9.1 | ಬಹುಮಹಡಿ ವಸತಿ ಕಟ್ಟಡ | ಪ್ರತಿ ನಿರ್ಮಿತ ಪ್ರದೇಶದ (ಸೂಪರ್ ಬಿಲ್ಟ್ ಅಪ್ ಏರಿಯಾ) ಚದರ ಮೀಟರ್‌ಗೆ ರೂ.35/- ಯಾ ರೂ.2,50,000/- ಯಾವುದು ಹೆಚ್ಚಿರುವುದೋ ಅದರಂತೆ | 27.10.2017 | ಪ್ರತಿ ನಿರ್ಮಿತ ಪ್ರದೇಶದ ( ಸೂಪರ್ ಬಿಲ್ಟ್ ಅಪ್ ಏರಿಯಾ) ಚದರ ಮೀಟರ್‌ಗೆ ರೂ.60/- ಯಾ ರೂ.3,00,000/- ಯಾವುದು ಹೆಚ್ಚಿರುವುದೋ ಅದರಂತೆ | 20% | 0070-60-109-0-02 |

| | | | | | | |
|---|---|---|---|---|---|---|
| 9.2 | ಬಹುಮಹಡಿ ವಾಣಿಜ್ಯ ಮತ್ತು ಬಹುಪಯೋಗಿ ಕಟ್ಟಡಕ್ಕೆ | ಪ್ರತಿ ನಿರ್ಮಿತ ಪ್ರದೇಶದ (ಸೂಪರ್ ಬಿಲ್ಟ್ ಅಪ್ ಏರಿಯಾ) ಚದರ ಮೀಟರ್‌ಗೆ ರೂ.60/- ಯಾ ರೂ.5,00,000/- ಯಾವುದು ಹೆಚ್ಚಿರುವುದೋ ಅದರಂತೆ | 27.10.2017 | ಪ್ರತಿ ನಿರ್ಮಿತ ಪ್ರದೇಶದ ( ಸೂಪರ್ ಬಿಲ್ಟ್ ಅಪ್ ಏರಿಯಾ) ಚದರ ಮೀಟರ್‌ಗೆ ರೂ.80/- ಯಾ ರೂ.6,00,000/- ಯಾವುದು ಹೆಚ್ಚಿರುವುದೋ ಅದರಂತೆ | 20% | 0070-60-109-0-02 |
| | | 2. ಪರಿಷ್ಕೃತ ನಿರಾಕ್ಷೇಪಣಾ ಪತ್ರ ನೀಡಲು | | 2. ಪರಿಷ್ಕೃತ ನಿರಾಕ್ಷೇಪಣಾ ಪತ್ರ ನೀಡಲು | | 0070-60-109-0-02 |
| **10.ಪರಿಷ್ಕೃತ ನಿರಾಕ್ಷೇಪಣಾ ಪತ್ರ:-** | | | | | | |
| 10.1 | ನಿರ್ಮಿತ ಪ್ರದೇಶದಲ್ಲಿ ಯಾವುದೇ ಶುಲ್ಕವಿಲ್ಲ. ಆದರೆ, ಸರ್ಕಾರದಿಂದ ಶುಲ್ಕದಲ್ಲಿ ಹೆಚ್ಚಳವಿಲ್ಲದೇ/ ಕಡಿಮೆ ಮಾಡಿ ಪರಿಷ್ಕೃತ ನಿರಾಕ್ಷೇಪಣಾ ಪತ್ರ ನೀಡಲು | ಯಾವುದೇ ಶುಲ್ಕವಿಲ್ಲ. ಆದರೆ ಸರ್ಕಾರದಿಂದ ಶುಲ್ಕದಲ್ಲಿ ಪರಿಷ್ಕರಣೆಯಾದ ನಿರಾಕ್ಷೇಪಣಾ ಪತ್ರ ಪಡೆದ ಸಮಯದಲ್ಲಿ ಪಾವತಿಸಿರುವ ಮೊತ್ತವನ್ನು ಕಳೆದು ಚಾಲ್ತಿಯಲ್ಲಿರುವ ದರದನ್ವಯ ವ್ಯತ್ಯಾಸದ ಮೊತ್ತ ಪಾವತಿಸುವುದು. | 27.10.2017 | ಯಾವುದೇ ಶುಲ್ಕವಿಲ್ಲ. ಆದರೆ ಸರ್ಕಾರದಿಂದ ಶುಲ್ಕದಲ್ಲಿ ಪರಿಷ್ಕರಣೆಯಾದ ನಿರಾಕ್ಷೇಪಣಾ ಪತ್ರ ಪಡೆದ ಸಮಯದಲ್ಲಿ ಪಾವತಿಸಿರುವ ಮೊತ್ತವನ್ನು ಕಳೆದು ಚಾಲ್ತಿಯಲ್ಲಿರುವ ದರದನ್ವಯ ವ್ಯತ್ಯಾಸದ ಮೊತ್ತ ಪಾವತಿಸುವುದು. | | |
| 10.2 | ನಿರ್ಮಿತ ಪ್ರದೇಶದಲ್ಲಿ ಹೆಚ್ಚಳವಿದ್ದು ಪರಿಷ್ಕೃತ ನಿರಾಕ್ಷೇಪಣಾ ಪತ್ರ ನೀಡಲು | ಹೆಚ್ಚುವರಿ ನಿರ್ಮಾಣಕ್ಕೆ ಮಾತ್ರ ಚಾಲ್ತಿಯಲ್ಲಿರುವ ದರದನ್ವಯ ಮೊತ್ತ | 27.10.2017 | ಹೆಚ್ಚುವರಿ ನಿರ್ಮಾಣಕ್ಕೆ ಮಾತ್ರ ಚಾಲ್ತಿಯಲ್ಲಿರುವ ದರದನ್ವಯ ಮೊತ್ತ | | |
| 10.3 | ಹೆಚ್ಚುವರಿ ನಿರ್ಮಾಣಕ್ಕೆ ಮಾತ್ರ ಚಾಲ್ತಿಯಲ್ಲಿರುವ ದರದನ್ವಯ | ಈ ಮೊದಲು ನಿರಾಕ್ಷೇಪಣಾ ಪತ್ರ ನೀಡಿ ನಿರ್ಮಾಣ ಮಾಡಿರುವ ಕಟ್ಟಡದ ಮೇಲೆ ಹೆಚ್ಚುವರಿ ಅಂತಸ್ತುಗಳನ್ನು ನಿರ್ಮಿಸಲು ನಿರಾಕ್ಷೇಪಣಾ ಪತ್ರ ನೀಡಲು | 27.10.2017 | ಈ ಮೊದಲು ನಿರಾಕ್ಷೇಪಣಾ ಪತ್ರ ನೀಡಿ ನಿರ್ಮಾಣ ಮಾಡಿರುವ ಕಟ್ಟಡದ ಮೇಲೆ ಹೆಚ್ಚುವರಿ ಅಂತಸ್ತುಗಳನ್ನು ನಿರ್ಮಿಸಲು ನಿರಾಕ್ಷೇಪಣಾ ಪತ್ರ ನೀಡಲು | | |
| **11.ಕ್ಲಿಯರೆನ್ಸ್ ಪತ್ರ ನವೀಕರಿಸಲು (ಪ್ರತಿ 2 ವರ್ಷಗಳಿಗೊಮ್ಮೆ) (ದಿನಾಂಕ:07.07.2011ರ ಅಧಿಸೂಚನೆಯನ್ವಯ)** | | | | | | |
| 11.1 | ಬಹುಮಹಡಿ ವಸತಿ ಕಟ್ಟಡಕ್ಕೆ (ಪ್ರತಿ ಬ್ಲಾಕ್/ವಿಂಗ್/ಟವರ್/ಕ್ಲಸ್ಟರ್/ಫೇಸ್/ಪಾರ್ಸಲ್) | 1. ಕಟ್ಟಡ ಎತ್ತರ 15-25ಮೀ ಎತ್ತರದವರೆಗೆ ಒಟ್ಟಾರೆ (Lumpsum) ರೂ.25,000/- | 27.10.2017 | 1. ಕಟ್ಟಡ ಎತ್ತರ 15-25ಮೀ ಎತ್ತರದವರೆಗೆ ಒಟ್ಟಾರೆ (Lumpsum) ರೂ.35,000/- | 40% | 0070-60-109-0-02 |
| | | 2. ಕಟ್ಟಡ ಎತ್ತರ 25ಮೀ ಮೇಲ್ಪಟ್ಟು 50ಮೀ ಎತ್ತರದವರೆಗೆ ಒಟ್ಟಾರೆ (Lumpsum) ರೂ.50,000/- | 27.10.2017 | 2. ಕಟ್ಟಡ ಎತ್ತರ 25ಮೀ ಮೇಲ್ಪಟ್ಟು 50ಮೀ ಎತ್ತರದವರೆಗೆ ಒಟ್ಟಾರೆ (Lumpsum) ರೂ.75,000/- | 50% | 0070-60-109-0-02 |

| | | | | | | |
|---|---|---|---|---|---|---|
| | | - | | 75,000/- | | |
| | | 3. ಕಟ್ಟಡದ ಎತ್ತರ 50ಮೀ ಮೇಲ್ಪಟ್ಟು ಒಟ್ಟಾರೆ (Lumpsum) ರೂ.1,00,000/- | 27.10.2017 | 3. ಕಟ್ಟಡದ ಎತ್ತರ 50ಮೀ ಮೇಲ್ಪಟ್ಟು ಒಟ್ಟಾರೆ (Lumpsum) ರೂ.1,50,000/- | 50% | 0070-60-109-0-02 |
| 11.2 | ಬಹುಮಹಡಿ ವಾಣಿಜ್ಯ ಮತ್ತು ಬಹುಪಯೋಗಿ ಕಟ್ಟಡಕ್ಕೆ (ಪ್ರತಿ ಬ್ಲಾಕ್/ವಿಂಗ್/ಟವರ್/ಕ್ಲಸ್ಟರ್/ಫೇಸ್/ಪಾರ್ಸಲ್) | 1. ಕಟ್ಟಡ ಎತ್ತರ 15-25ಮೀ ಎತ್ತರದವರೆಗೆ ಒಟ್ಟಾರೆ (Lumpsum) ರೂ.50,000/- | 27.10.2017 | 1. ಕಟ್ಟಡ ಎತ್ತರ 15-25ಮೀ ಎತ್ತರದವರೆಗೆ ಒಟ್ಟಾರೆ (Lumpsum) ರೂ.75,000/- | 50% | 0070-60-109-0-02 |
| | | 2. ಕಟ್ಟಡ ಎತ್ತರ 25ಮೀ ಮೇಲ್ಪಟ್ಟು 50ಮೀ ಎತ್ತರದವರೆಗೆ ಒಟ್ಟಾರೆ (Lumpsum) ರೂ.1,00,000/- | 27.10.2017 | 2. ಕಟ್ಟಡ ಎತ್ತರ 25ಮೀ ಮೇಲ್ಪಟ್ಟು 50ಮೀ ಎತ್ತರದವರೆಗೆ ಒಟ್ಟಾರೆ (Lumpsum) ರೂ.1,50,000/- | 50% | 0070-60-109-0-02 |
| | | 3. ಕಟ್ಟಡದ ಎತ್ತರ 50ಮೀ ಮೇಲ್ಪಟ್ಟು ಒಟ್ಟಾರೆ (Lumpsum) ರೂ.2,00,000/- | 27.10.2017 | 3. ಕಟ್ಟಡದ ಎತ್ತರ 50ಮೀ ಮೇಲ್ಪಟ್ಟು ಒಟ್ಟಾರೆ (Lumpsum) ರೂ.3,00,000/- | 50% | 0070-60-109-0-02 |

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ
ಮತ್ತು ಅವರ ಹೆಸರಿನಲ್ಲಿ

B.K. [signature] 30/3/24

(ಬಿ.ಕೆ ಭುವನೇಂದ್ರ ಕುಮಾರ್)
ಸರ್ಕಾರದ ಅಧೀನ ಕಾರ್ಯದರ್ಶಿ,
ಒಳಾಡಳಿತ ಇಲಾಖೆ(ಪೊ.ಸ.ಸೇ).

[signature] 30/3/24